ಓ.ಎಸ್. ನಂ. 51/2021 ಡಿ.ಡಬ್ಲೂಃ 1

ದಿನಾಂಕಃ 21.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಪಾಟೀಸವಾಲು ವಾದಿಯ ಪರ ಶ್ರೀ. ಎಸ್.ಎ. ವಕೀಲರಿಂದ :-

ವಾದಿ ನನ್ನ ತಮ್ಮ. 2 ನೇ ಪ್ರತಿವಾದಿ ನನ್ನ ತಮ್ಮ. ವಾದಿ ನಿವೃತ್ತ ಶಿಕ್ಷಕರಿರುತ್ತಾರೆ. ವಾದಿ ನಿವೃತ್ತಿಯಾದ ನಂತರ ನಮ್ಮೂರಿಗೆ ವಾಸ ಮಾಡಲು ಬಂದಿರುತ್ತಾರೆ ಎಂದರೆ ಸರಿ. ನಾನು ವ್ಯವಸಾಯ ಮಾಡಿಕೊಂಡಿದ್ದೇನೆ. 2ನೇ ಪ್ರತಿವಾದಿ ಸಹಾ ವ್ಯವಸಾಯ ಮಾಡಿಕೊಂಡಿದ್ದಾರೆ. ವಾದಿ ಯಾವ ಕಾರಣಕ್ಕಾಗಿ ದಾವೆ ಸಲ್ಲಿಸಿದ್ದಾರೆ ಎಂದು ನಿಮಗೆ ಗೊತ್ತ ಎಂದರೆ ಸಾಕ್ಷಿ ನಾವು ಈಗಾಗಲೇ ವಿಭಾಗ ಮಾಡಿಕೊಂಡು ನಮ್ಮ ನಮ್ಮ ಹಿಸ್ಸೆಗಳ ಸ್ವಾಧೀನದಲ್ಲಿ ಇದ್ದರು ಸಹಾ ವಾದಿ ತನಗೆ ಕಡಿಮೆ ಬಂದಿದೆ ಎಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ವಾದ ಪತ್ರದಲ್ಲಿ ಏನೇನು ಬರೆದಿದ್ದಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ವಾದ ಪತ್ರದಲ್ಲಿ ಒಟ್ಟು ಕುಟುಂಬದ ಆಸ್ತಿಗಳ ಬಗ್ಗೆ ವಾದಿಯು ಹೇಳಿರುವ ಎಲ್ಲಾ ಅಂಶಗಳು ನಿಜ ಇರುತ್ತದೆ ಎಂದರೆ ಸಾಕ್ಷಿ ನಾವು ಏನೇನು ಪಾಲು ವಿಭಾಗ ಮಾಡಿಕೊಂಡಿರುತ್ತೇವೆ ಅದೆಲ್ಲವೂ ಸಹಾ ಸತ್ಯವಾಗಿರುತ್ತದೆ ಎಂದು ನುಡಿಯುತ್ತಾರೆ.

ನಾವು ವಿಭಾಗ ಮಾಡಿಕೊಂಡ ಪ್ರಕಾರ ವಾದಿಗೆ ಕಡಿಮೆ ಕ್ಷೇತ್ರ ಬಂದಿದೆ ಎಂದರೆ ಸಾಕ್ಷಿ ನಾವು ಸರ್ವೆ ನಂಬರ್‌ಗಳ ಆಧಾರದ ಮೇಲೆ ಪಾಲು ವಿಭಾಗ ಮಾಡಿಕೊಂಡಿದ್ದು ಒಂದು ಕಡೆ ಕಡಿಮೆ ಬಂದಿರಬಹುದು ಆದರೆ ಇನ್ನೊಂದು ಸರ್ವೆ ನಂಬರ್‌ನಲ್ಲಿ ಹೆಚ್ಚಿಗೆ ಸಹಾ ವಾದಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ಮತ್ತು 2 ನೇ ಪ್ರತಿವಾದಿ ಬೇರೆ ಬೇರೆಯಾಗಿ ಈ ಕೇಸ್ ಅನ್ನು ನಡೆಸುತ್ತಿದ್ದೇವೆ. ಈಗಾಗಲೇ ನಾವು ಪಾಲು ವಿಭಾಗ ಮಾಡಿಕೊಂಡಿದ್ದು ಸತ್ಯವಾಗಿದ್ದು ಆ ಪ್ರಕಾರ ಮುಂದುವರೆಯಬಹುದು ಇಲ್ಲಾವಾದರೇ ಕೇಸು ನಡೆಸಬಹುದು ಎಂದು ಪ್ರತಿವಾದ ಪತ್ರ ಸಲ್ಲಿಸಿರುತ್ತೇನೆ. ನನಗೆ ಕನ್ನಡ ಓದಲು ಬರೆಯುತ್ತದೆ. ಈ ಪ್ರಕರಣದಲ್ಲಿ 2 ನೇ ಪ್ರತಿವಾದಿ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಸಲ್ಲಿಸಿದ

ಪ್ರತಿವಾದಿ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ನಾನು ಮತ್ತು 2 ನೇ ಪ್ರತಿವಾದಿ ಹೊನ್ನೇನಹಳ್ಳಿಯಲ್ಲಿಯೇ ವಾಸವಾಗಿದ್ದೇವೆ ಎಂದರೆ ಸಾಕ್ಷಿ ನಾನು ಹೊನ್ನೇನಹಳ್ಳಿಯಲ್ಲಿ ವಾಸವಾಗಿದ್ದೇನೆ, 2 ನೇ ಪ್ರತಿವಾದಿ ಕೆ.ಆರ್.ಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ಮತ್ತು 2 ನೇ ಪ್ರತಿವಾದಿ ಬೇರೆ ಬೇರೆ ಊರುಗಳನ್ನು ವಾಸವಾಗಿದ್ದು, ನಾನೊಬ್ಬನೇ ಹೊನ್ನೇನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದರಿಂದ ಎಲ್ಲಾ ಆಸ್ತಿಗಳ ಉಸ್ತುವಾರಿಯನ್ನು ನಾನು ಒಬ್ಬನೇ ನೋಡಿಕೊಳ್ಳುತ್ತಿದ್ದೇನೆ ಎಂದರೆ ಸಾಕ್ಷಿ ಪಾಲು ವಿಭಾಗ ಆದ ನಂತರ ಅವರ ಅವರ ಹಿಸ್ಸೆಗಳನ್ನು ಅವರವರೇ ನೋಡಿಕೊಳ್ಳುತ್ತಿದ್ದಾರೆ ಎಂದು ನುಡಿಯುತ್ತಾರೆ. ವಿಭಾಗ ಆಗುವುದಕ್ಕಿಂತ ಮುಂದೆ ನಾನೇ ಆಸ್ತಿಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದೆ.

ನನಗೆ ಇಬ್ಬರು ಜನ ಗಂಡು ಮಕ್ಕಳು, ಅವರ ಪೈಕಿ ಒಬ್ಬ ರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು, ಇನ್ನೊಬ್ಬ ವಕೀಲ ವೃತ್ತಿ ಮಾಡುತ್ತಿದ್ದಾರೆ. 2 ನೇ ಪ್ರತಿವಾದಿಗೆ ಇಬ್ಬರು ಗಂಡು ಮಕ್ಕಳು ಒಬ್ಬ ಹೆಣ್ಣುಮಗಳಿದ್ದು, ಮಗಳನ್ನು ಮದುವೆ ಮಾಡಿಕೊಟ್ಟಿದ್ದು, ಒಬ್ಬ ಮಗ ಪೊಲೀಸ್ ಇಲಾಖೆಯಲ್ಲಿದ್ದು, ಇನ್ನೊಬ್ಬ ವ್ಯವಸಾಯ ಮಾಡುತ್ತಿದ್ದಾನೆ. ವಾದಿಗೆ ಒಬ್ಬ ಗಂಡು ಮಗ ಹಾಗೂ ಹೆಣ್ಣುಮಗಳಿದ್ದು, ಹೆಣ್ಣುಮಗಳನ್ನು ಮದುವೆ ಮಾಡಿಕೊಟ್ಟಿರುತ್ತಾರೆ, ಮಗ ಡಿಪ್ಲಮೋ ಮುಗಿಸಿ ಯಾವುದೇ ಫ್ಯಾಕ್ಟರಿಯಲ್ಲಿ ನೌಕರಿ ಮಾಡುತ್ತಿದ್ದಾರೆ. ನಾನು, ವಾದಿ ಹಾಗೂ 2ನೇ ಪ್ರತಿವಾದಿ ಕೇವಲ ಮನೆಗಳನ್ನು ಬೇರೆ ಮಾಡಿಕೊಂಡಿದ್ದು, ಜಮೀನು ಒಟ್ಟಿಗೆ ಇದೆ ಎಂದು ನುಡಿಯುತ್ತಾರೆ. ವಾದಿ, ನಾನು ಹಾಗೂ 2ನೇ ಪ್ರತಿವಾದಿ ಮಾಡಿಕೊಂಡ ಮನೆಗಳು ನಮ್ಮ ನಮ್ಮ ಸ್ವಯಾರ್ಜಿತ ಆಸ್ತಿಗಳಾಗಿರುತ್ತದೆ ಎಂದರೆ ಸರಿ. ಹೊನ್ನೇನಹಳ್ಳಿ ಗ್ರಾಮದ ಮನೆಗಳಿಗೆ ಸಂಬಂಧಪಟ್ಟಂತೆ ನಮ್ಮ ಮೂರು ಜನರ ಮಧ್ಯೆ ಯಾವುದೇ ತಕರಾರು ಇಲ್ಲ

ಎಂದರೆ ಸರಿ. ನಾನು ಮನೆಯ ಹಿರಿಯ ಮಗನಾಗಿದ್ದು ಮೊದಲಿನಿಂದಲೂ ಆಸ್ತಿಗಳನ್ನು ನಾನೇ ನೋಡಿಕೊಳ್ಳುತ್ತಿದ್ದರಿಂದ ಯಾವ ಯಾವ ಆಸ್ತಿಗಳು ಎಲ್ಲಿ ಎಲ್ಲಿ ಇದೆ ಎಂದು ನನಗೆ ಸಂಪೂರ್ಣವಾಗಿ ಗೊತ್ತಿದೆ ಎಂದರೆ ಸರಿ.

ಹೊನ್ನೇನಹಳ್ಳಿ ಗ್ರಾಮದಲ್ಲಿ ದಾವಾ ಷೆಡ್ಯೂಲ್ 1 ಆಸ್ತಿ ಇದೆ ಎಂದರೆ ಸರಿ. ಅದೇ ರೀತಿ ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂಬರ್ 2 ರಲ್ಲಿ 6 ಎಕರೆ 3 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿ ಸರ್ವೆ ನಂಬರ್ 2 ರಲ್ಲಿ ಅಲ್ಲಾ ಅದು ತಪ್ಪಾಗಿದ್ದು, ಸರ್ವೆ ನಂಬರ್ 20 ರಲ್ಲಿ 6 ಎಕರೆ 3 ಗುಂಟೆ ಇದೆ ಎಂದು ನುಡಿಯುತ್ತಾರೆ. ಹಳೆ ಸರ್ವೆ ನಂಬರ್ 2 ಇದ್ದು ಈಗ ಹೊಸದಾಗಿ ಸರ್ವೆ ನಂಬರ್ 20 ಎಂದು ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದಕ್ಕೆ ಯಾವುದೇ ಹಳೆ ಸರ್ವೆ ನಂಬರ್ ಇರುವುದಿಲ್ಲ, ಮೊದಲಿನಿಂದಲೂ 20 ಇದೆ ಎಂದು ನುಡಿಯುತ್ತಾರೆ. ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂಬರ್ 14/2 ರಲ್ಲಿ 1 ಎಕರೆ 3 ಗುಂಟೆ ಆಸ್ತಿ ಇದೆ ಎಂದರೆ ಸರಿ. ಅದೇ ರೀತಿ ಹೊನ್ನೇನಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ 24 ರಲ್ಲಿ 12 ವರೆ ಗುಂಟೆ ಆಸ್ತಿ ಇದೆ ಎಂದರೆ ಸರಿ. ಅದೇ ರೀತಿ ಹೊನ್ನೇನಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ 16 ರಲ್ಲಿ 14 ಗುಂಟೆ ಆಸ್ತಿ ಇದೆ ಎಂದರೆ ಸರಿ. ದಾವಾ ಷೆಡ್ಯೂಲ್ ಕ್ರಮ ಸಂಖ್ಯೆ 1 ರಿಂದ 5 ಆಸ್ತಿಗಳನ್ನು ನಾನೇ ಸಾಗು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗಾದರೆ ನೀವು ಯಾವ ಆಸ್ತಿಯಲ್ಲಿ ಸಾಗು ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ದಾವಾ ಷೆಡ್ಯೂಲ್ ಕ್ರಮ ಸಂಖ್ಯೆ 1 ನ್ನು ನಾನು ಸಾಗು ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಕ್ರಮ ಸಂಖ್ಯೆ 4 ಮತ್ತು 5 ನ್ನು ವಾದಿ ಸಾಗು ಮಾಡುತ್ತಿದ್ದು, ಕ್ರಮ ಸಂಖ್ಯೆ 3 ನೇ ಆಸ್ತಿಯನ್ನು 2 ನೇ ಪ್ರತಿವಾದಿ ಸಾಗು ಮಾಡುತ್ತಿದ್ದಾರೆ.

ಹೊನ್ನೇನಹಳ್ಳಿ ಗ್ರಾಮದ ಸರ್ವೆ ನಂಬರ್. 20 ರಲ್ಲಿ ಮೂರು ಜನ ತಲಾ 2 ಎಕರೆ 2 ಗುಂಟೆ ಕ್ಷೇತ್ರವನ್ನು ಸಾಗು ಮಾಡುತ್ತಿದ್ದೇವೆ. ಸರ್ವೆ ನಂಬರ್ 20 ರಲ್ಲಿ ನಾನು ಹೇಳುವಂತೆ ಅಷ್ಟೊಂದು ಕ್ಷೇತ್ರ ಇಲ್ಲಾ ಹೀಗಾಗಿ ಪ್ರತಿಯೊಬ್ಬರು 2 ಎಕರೆ 2 ಗುಂಟೆ ಕ್ಷೇತ್ರವನ್ನು ಸಾಗು ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್. 14/2 ನ್ನು ಮೂರು ಜನ ಹಂಚಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂಬರ್ 14/2 ನ್ನು ಪೂರ್ತಿಯಾಗಿ 2 ನೇ ಪ್ರತಿವಾದಿ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಹೀಗಾಗಲೆ ಮೂರು ಜನ ಹಂಚಿಕೊಂಡಿರುವಂತಹ ಆಸ್ತಿಗಳಲ್ಲಿಯ ಚೆಕ್‌ಬಂಧಿಗಳು ಸರಿಯಾಗಿದೆ ಎಂದರೆ ನಿಜ. ನಾವು ಹಂಚಿಕೊಂಡಿರುವ ಎಲ್ಲಾ ಆಸ್ತಿಗಳು ಸಹಾ ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲಿ ನಮ್ಮ ಮೂರು ಜನರಿಗೂ ಸಹಾ ಸಮನಾದ ಹಕ್ಕು ಇದೆ ಎಂದರೆ ಸಾಕ್ಷಿ ಸಮನಾದ ಹಕ್ಕಿದೆ ಆದರೆ ನಾವು ಹೀಗಾಗಲೇ ಸರ್ವೆ ನಂಬರ್‌ಗಳ ಪ್ರಕಾರ ಆಸ್ತಿಗಳನ್ನು ಹಂಚಿಕೊಂಡಿದ್ದು ಅದರ ಪ್ರಕಾರ ಒಬ್ಬರಿಗೆ ಹೆಚ್ಚು ಕಡಿಮೆ ಬಂದಿರಬಹುದು ಎಂದು ನುಡಿಯುತ್ತಾರೆ.

ಸುಮಾರು 30 ವರ್ಷಗಳಿಂದ ನಮ್ಮ ಮೂರು ಜನರ ಸಂಬಂಧ ಚೆನ್ನಾಗಿಲ್ಲ ಎಂದರೆ ಸಾಕ್ಷಿ ಚೆನ್ನಾಗಿದ್ದೇವು ಇತ್ತಿಚೆಗೆ ಸ್ವಲ್ಪ ಭಿನ್ನಾಭಿಪ್ರಾಯ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ತಂದೆ 1994 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ಜೀವಂತ ಇದ್ದಾಗ ಮೂರು ಜನರಿಗೆ ಹಿಸ್ಸೆ ಪಾಲುಪಟ್ಟಿ ಮಾಡಿಕೊಟ್ಟಿರಲಿಲ್ಲ ಎಂದರೆ ಸರಿ. ನನ್ನ ತಂದೆ ಜೀವಂತ ಇದ್ದಾಗ ವಾದಿ ಸರ್ಕಾರಿ ಹುದ್ದೆಗೆ ಸೇರಿದ್ದರು. ವಾದಿ ಸರ್ಕಾರಿ ನೌಕರಿಯಲ್ಲಿದ್ದ ಕಾರಣ ಬೇರೆ ಬೇರೆ ಊರುಗಳಲ್ಲಿ ವಾಸ ಮಾಡುತ್ತ ಹೊನ್ನೇನಹಳ್ಳಿ ಗ್ರಾಮದಲ್ಲಿ ಯಾವತ್ತೂ ಸಹಾ ವಾಸವಾಗಿರಲಿಲ್ಲ ಎಂದರೆ ಸರಿ. ನನಗಿಂತ ವಾದಿಯು ಹೆಚ್ಚಿನ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿ. ನನ್ನ

ತಂದೆ ತೀರಿಕೊಂಡ ನಂತರ ಹಾಗೂ ನಮ್ಮಲ್ಲಿ ವಿಭಾಗ ಮಾಡಿಕೊಳ್ಳುವುದಕ್ಕಿಂತ ಮಧ್ಯದ ಅವಧಿಯಲ್ಲಿ ಮನೆಯ ಹಿರಿಯ ಮಗನಾಗಿ ಎಲ್ಲಾ ಆಸ್ತಿಗಳ ಉಸ್ತುವಾರಿ ನನ್ನ ಬಳಿಯೇ ಇತ್ತು ಎಂದರೆ ಸರಿ. ಆಸ್ತಿಯಲ್ಲಿ ವಿಭಾಗ ಕೊಡಬೇಕೆಂದು ವಾದಿ ನನ್ನನ್ನು ಯಾವತ್ತೂ ಕೇಳಿಲ್ಲ ಎಂದರೆ ಸಾಕ್ಷಿ ನಮ್ಮಲ್ಲಿ ವೈಮನಸ್ಸು ಬಂದಾಗ ಕೇಳಿದ್ದರು, ದಿನಾಂಕ, ತಿಂಗಳು, ವರ್ಷ ನನಗೆ ಹೇಳಲು ಬರುವುದಿಲ್ಲ. ವಾದಿ ಆಸ್ತಿಯಲ್ಲಿ ವಿಭಾಗ ಕೇಳಿದ ನಂತರ ನಾವು ವಿಭಾಗ ಪತ್ರ ಮಾಡಿಕೊಂಡಿರುತ್ತೇವೆ.

ವಾದಿ 2014 ನೇ ಇಸವಿಯಲ್ಲಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ. 2014 ರಲ್ಲಿ ನಿವೃತ್ತಿಯಾದ ನಂತರ ವಾದಿ ಹೊನ್ನೇನಹಳ್ಳಿ ಗ್ರಾಮದಲ್ಲಿಯ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ನಾನು ಜಮೀನುಗಳ ವಿಷಯವಾಗಿ ಏನೇನು ಮಾಡಿದ್ದೇನೆ ಎಂದು ವಾದಿಗೆ 2014 ರಲ್ಲಿ ವ್ಯವಸಾಯ ಮಾಡಲು ಜಮೀನಿಗೆ ಬಂದಾಗ ಅವರಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. 2014 ಅಂದರೆ ವಾದಿ ನಿವೃತ್ತಿಯಾಗುವುದಕ್ಕಿಂತ ಮೊದಲು ಅವರ ಹಿಸ್ಸೆಯ ಜಮೀನುಗಳನ್ನು ಯಾರು ವ್ಯವಸಾಯ ಮಾಡುತ್ತಿದ್ದರು ಎಂದರೆ ಸಾಕ್ಷಿ ನಾನು ಮಾಡುತ್ತಿದ್ದೆ, ಅದರಲ್ಲಿ ಬೆಳೆದ ಎಲ್ಲಾ ಧಾನ್ಯಗಳನ್ನು ಕೊಡುತ್ತಿದ್ದೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ಓ.ಎಸ್. ನಂ. 51/2021 ಡಿ.ಡಬ್ಲೂಃ 1

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ